ಶ್ರೀ ಕೆ. ಎಚ್. ರಂಗನಾಥ್.—ಹೊಸದುರ್ಗ ತಾಲ್ಲೂಕಿನಲ್ಲಿ ಈ ಅಮೃತಮಹಲ್ ಕಾವಲನಲ್ಲಿ ಎಷ್ಟು ಜಮೀನನ್ನು ಹಂಚಬೇಕೆಂದು ಸರ್ಕಾರ ಆಲೋಚನೆ ಮಾಡಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ—ಆ ವಿವರಗಳು ನನ್ನಲ್ಲಿಲ. ಮಾನ್ಯ ಸದಸ್ಯರು ಹೇಳಿದ ತಾಲ್ಲೂಕಿನಲ್ಲಿ ಸುಮಾರು 300-400 ಎಕರೆಗಳಷ್ಟು ಜಮೀನನ್ನು ಕೊಟ್ಟಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಪಂಜಾಬಿನ ಜೆ. ಕೆ. ಆರ್ಗನೈಜೇಷ್ಷ ನಂಸ್ಥೆಯವರು ಕುರಿ ತಳಿಯ ಅಭಿವೃದ್ಧಿಗೋಸ್ಕರ 15 ಸಾವಿರ ಎಕರೆಯಷ್ಟು ಜಮೀನನ್ನು ಅಮೃತಮಹಲ್ ಕಾವಲಿನಿಂದ ಕೊಡಬೇಕೆಂದು ಕೇಳಿರುವುದರಿಂದ ಆ ರೀತಿ ಸರ್ಕಾರದವರು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿಯಾಗಿ 2-3 ನಂಸ್ಥೆಯವರು ಕೇಳುತ್ತಿದ್ದಾರೆ. ಆಸ್ಟ್ರೇಲಿಯಾದಲ್ಲಿ ಹವಾಗುಣ ಚೆನ್ನಾಗಿರುವುದರಿಂದ ಅಲ್ಲಿಂದ ಉಣ್ಣೆಯನ್ನು ಇಲ್ಲಿಗೆ ಅನೇಕರು ತರಿಸುತ್ತಿದ್ದಾರೆ. ಅಂತಹವರಿಗೆ 10-15 ಸಾವಿರ ಎಕರೆಯಷ್ಟು ಜಮೀನನ್ನು ಆ ಕಾವಲಿನಿಂದ ಕೊಟ್ಟಿಲ್ಲ. 12 ಸಾವಿರ ಎಕರೆಯಷ್ಟು ಜಮೀನು ಒಂದು ಸ್ಥಳದಲ್ಲಿಯೇ ಇಲ್ಲ. ಎಮ್ಮೆದೊಡ್ಡಿ ಹತ್ತಿರ ಆ ರೀತಿ ಇತ್ತು. ಅದು ಈಗಾಗಲೇ ವಿಲೇವಾರಿಯಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಎಕ್ಸ್ ಸೈಜ್ ಲ್ಯಾಂಡ್ಸನ್ನು ರಿಲೀಜ್ ಮಾಡುವುದಕ್ಕೋಸ್ಕರ ತಾಲ್ಲೂಕ್ ಲೆವೆಲ್ಲನಲ್ಲಿ ಕಮಿಟಿ ಮಾಡಿದ್ದರು. ಆ ಕಮಿಟಿ ಶಿಫಾರ್ಸು ಮಾಡಿದರೂ ಇನ್ನೂ ಆ ಜಮೀನುಗಳನ್ನು ರಿಲೀಜ್ ಮಾಡದೇ ಇರುವುದರಿಂದ ಹೇಳದೆ ಕೇಳದೆ ಜನರು ಹುಟ್ಟುಕೊಳ್ಳುತ್ತಾ ಇಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಮೃತಮಹಲ್ ಕಾವಲನಲ್ಲಿನ ಎಕ್ಸ್ ಸೈಜ್ ಲ್ಯಾಂಡ್ಸನ್ನು ವಿಲೇವಾರಿ ಮಾಡುವುದಕ್ಕಾಗಿ ಫಾರೆಸ್ಟ್ ಸಬ್‌ಡಿವಿಜನ್ ಆಫೀಸರ ಅಧ್ಯಕ್ಷತೆಯಲ್ಲಿ ತಾಲ್ಲೂಕ್‌ಬೋರ್ಡ್ ಚೇರ್‌ಮನ್ ಅವರೂ ಸೇರಿ ಎಷ್ಟು ಜಮೀನನ್ನು ವ್ಯವಸಾಯಕ್ಕಾಗಿ ಈ ಕಾವಲಿನಲ್ಲಿ ಬಿಟ್ಟುಕೊಡಬಹುದು, ಅರಣ್ಯಶಾಖೆಗೆ ಎಷ್ಟು ಜಮೀನನ್ನು ಬಿಟ್ಟುಕೊಡಬಹುದು, ಅಫಾರೆಸ್ಟೇಷನ್ನಿಗಾಗಿ ಎಷ್ಟು ಜಮೀನು ಬಿಟ್ಟುಕೊಡಬಹುದು ಎಂಬುದನ್ನು ಇತ್ಯರ್ಥಮಾಡಿ ಒಂದು ವರದಿಯನ್ನು ಕಳುಹಿಸಬೇಕೆಂದು ಸಂಬಂಧಪಟ್ಟ ಇಲಾಖೆಯನ್ನು ಕೇಳಿದ್ದೇವೆ. ಈಗ್ಗೆ 1½ ವರ್ಷಗಳಾದುವು. ಈಗಾಗಲೇ 18 ಜಿಲ್ಲೆಗಳಿಂದ ವರದಿಗಳು ಬಂದಿವೆ. ಅದರ ಬಗ್ಗೆ ಕೆಲವು ಕಡೆಗಳಿಗೆ ಉತ್ತರ ಕೊಟ್ಟಿದ್ದೇವೆ. ಇಷ್ಟರಲ್ಲಿಯೇ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಮೃತಮಹಲ್ ಕಾವಲನಲ್ಲಿ ಎಕ್ಸ್ ಸೈಜ್ ಮತ್ತು ಫಾರೆಸ್ಟ್‌ಗೆ ಅನುಕೂಲವಾಗುವಂಥ ಜಮೀನುಗಳಿರುವುದರಿಂದ ಕೆಲವು ಗ್ರಾಮಸ್ಥರು ಜಮೀನಿಗಾಗಿ ಅರ್ಜಿ ಹಾಕಿದ್ದರೆ, ಅದು ಮಂಜೂರಾಗಿಲ್ಲ ಎಂದು ಅದನ್ನು ಕೊಡದೆ ಬೇರೆ ಗ್ರಾಮಸ್ಥರು ಹಾಕಿದಾಗ ಅವರ ಅರ್ಜಿಯನ್ನು ಪರ್ಯಾಲೋಚಿಸಿಕೊಟ್ಟಿರುವುದು ಸರಿಯೇ ? ಇದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಯಾವುದಾದರೂ ಅಂತಹ ನಿದರ್ಶನವಿದ್ದರೆ ಮಾನ್ಯ ಸದಸ್ಯರು ಹೇಳಲಿ. ನೋಡೋಣ.

Allotment of Cars

*Q.—299. **Sri K. LAKKAPPA** (Hebbur).—

Will the Government be pleased to state :—

(*a*) the number of persons to whom cars have been allotted out of the State quota during the year 1963 and 1964 ;

(*b*) the dates of their applications ;

(*c*) the principles followed in allotting these cars ;

(*d*) whether it has come to their notice that priority has been overlooked while allotting the cars ;

(*e*) if so, the steps they intend to take in this behalf ?

A.—Sri S. R. KANTHI (Minister for Education) [on behalf of SRI S. NIJALINGAPPA (Chief Minister)].—

(*a*) *Year*	*No. of persons allotted.*
1963	... 80
1964	... 81
Total	... 161

(*b*) *Vide* Statements A, B and C placed on the Table of the House*.

(*c*) Priority, need and urgency. Only public or official purpose is taken into consideration.

(*d*) Priority is not the only criterion for allotment of cars.

(*e*) This does not arise in view of reply to clause (*d*).

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಆದ್ಯತೆ, ಅವಶ್ಯಕತೆ, ಹಾಗೂ ಜರೂರು ಪರಿಸ್ಥಿತಿ ಸಾರ್ವಜನಿಕ ಇಲ್ಲವೆ ಸರ್ಕಾರಿ ಉದ್ದೇಶಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಕಾರುಗಳನ್ನು ಹಂಚಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ಈಗ ಕಾರುಗಳಿಗೆ ಅರ್ಜಿಯನ್ನು ಹಾಕಿರತಕ್ಕವರೆಲ್ಲರೂ ಅರ್ಜಿಯಲ್ಲಿ ಆದ್ಯತೆ ಅವಶ್ಯಕತೆ ಜರೂರು ಪರಿಸ್ಥಿತಿ ಇವುಗಳನ್ನೆಲ್ಲಾ ನಮೂದು ಮಾಡಿ ಕಳುಹಿಸಿಕೊಟ್ಟಿದ್ದಾರೆಯ ?

ಶ್ರೀ ಎಸ್. ಆರ್. ಕಂಠಿ.—ಅರ್ಜಿಯಲ್ಲಿ ಅವುಗಳನ್ನು ನಮೂದು ಮಾಡಬೇಕೆಂದಿದೆ, ಅರ್ಜಿ ಹಾಕಿರುವವರು ಅದನ್ನೆಲ್ಲಾ ನಮೂದು ಮಾಡಿರುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಕೆಲವರು ಅರ್ಜಿಯಲ್ಲಿ ಆದ್ಯತೆ, ಅವಶ್ಯಕತೆ ಮತ್ತು ಜರೂರು ಪರಿಸ್ಥಿತಿಯನ್ನು ಬರೆಯದೆ ಇದ್ದರೂ ಕೂಡ ಅವರುಗಳು ಅರ್ಜಿಯನ್ನು ಹಾಕಿದ 3 ತಿಂಗಳಲ್ಲಿಯೇ ಅವರಿಗೆ ಕಾರನ್ನು ಕೊಟ್ಟಿರುವ ಪ್ರಬಲವಾದ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಅದು ಕೆಲವು ಸಂದರ್ಭಗಳಲ್ಲಿ ಅರ್ಜಿನ್ಸಿ ಮತ್ತು ಅವಶ್ಯಕತೆಯ ಮೇಲೆ ಕೊಡಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈಗ ತಾವು ನಮಗೆ ಒದಗಿಸಿರತಕ್ಕ ಪಟ್ಟಿಯಲ್ಲಿರುವಂತೆ ಶ್ರೀ ಮಹಮದಾಲಿಯವರಿಗೂ ಒಂದು ಕಾರನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ, ಅವರಿಗೆ ಕಾರನ್ನು ಕೊಡಬೇಕಾದರೆ ಅವರಿಗೆ ಅಂಥಾ ಅರ್ಜಿನ್ಸಿ ಮತ್ತು ಎಮರ್ಜೆನ್ಸಿ ಏನಿತ್ತು ?

ಶ್ರೀ ಎಸ್. ಆರ್. ಕಂಠಿ.—ಅವರು ಒಬ್ಬರು ಪಬ್ಲಿಕ್ ವರ್ಕರ್ ಆಗಿದ್ದಾರೆ, ಮತ್ತು ಅವರು ಒಂದು ದೊಡ್ಡ ಸ್ಥಾನದಲ್ಲಿ ಇದ್ದಾರೆ, ಅವರಿಗೆ ಕಾರು ಬೇಕಾಗುತ್ತದೆ, ಅವರಿಗೆ ಅದರ ಅರ್ಜಿನ್ಸಿ ಇದೆ, ಅದಕ್ಕೋಸ್ಕರ ಅವರಿಗೆ ಕಾರನ್ನು ಕೊಟ್ಟಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಒಂದು ಕಾರು ಎರಡು ಕಾರು ಇರುವವರಿಗಿಂತಲೂ ಒಂದು ಕಾರೂ ಇಲ್ಲದೆ ಇರುವವರಿಗೆ ಆದ್ಯತೆ ಮತ್ತು ಅವಶ್ಯಕತೆ ಹೆಚ್ಚಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಯಾರಿಗೆ ಅದರ ಅವಶ್ಯಕತೆ ಇರುತ್ತದೆ ಅವರಿಗೆ ಸಿಕ್ಕುತ್ತದೆ, ನಮ್ಮ ರಾಜ್ಯಕ್ಕೆ ಕೊಟ್ಟಿದ್ದಂತಹ ಕೋಟಾ ಬಹಳ ಕಡಿಮೆ, ಆದಾಗ್ಯೂ ಕೂಡ ನಾವು 1963-64 ನೇ ಸಾಲಿನಲ್ಲಿ ಒಟ್ಟು 161 ಕಾರುಗಳನ್ನು ಹಂಚಿದ್ದೇವೆ. ಇದರಲ್ಲಿ ಯಾರಿಗೆ ಸ್ವಲ್ಪ ಹೆಚ್ಚಿನ ಅರ್ಜೆನ್ಸಿ ಮತ್ತು ಅವಶ್ಯಕತೆ ಇರುತ್ತದೆಯೋ ಅವರಿಗೆ ಅದನ್ನು ಕೊಡಬೇಕಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅರ್ಜೆನ್ಸಿ ಮತ್ತು ಅವಶ್ಯಕತೆಯನ್ನು ಅರ್ಜಿಯಲ್ಲಿ ಬರೆದುಕೊಂಡು 1962 ನೇ ಇಸವಿಯಿಂದಲೂ ಕಾರು ಕೊಡಬೇಕೆಂದು ಕೇಳುತ್ತಾ ಇದ್ದರೂ ಕೂಡ ಬಹಳ ಅವಶ್ಯಕತೆ ಇರುವ ಜನಗಳಿಗೆ ಕಾರನ್ನು ಕೊಡದೆ ಅವಶ್ಯಕತೆ ಇಲ್ಲದೆ ಇರುವವರಿಗೆ 2-3 ಕಾರನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

---

*Copy placed in the Mysore Legislature Library—*Vide* No. 7 dated 5th March 1965.

ಶ್ರೀ ಎಸ್. ಆರ್. ಕಂಠಿ.—ಅಂಥಾದ್ದು ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ವಿಧಾನಸಭೆಯ ಸದಸ್ಯರುಗಳಿಗೆ ಆದ್ಯತೆಯನ್ನು ಕೊಡಬೇಕೆಂದು ಸರ್ಕಾರದ ಗಮನದಲ್ಲಿದೆಯೇ ಮತ್ತು ಇಲ್ಲಿಯವರೆಗೂ ವಿಧಾನಸಭೆಯ ಸದಸ್ಯರುಗಳಿಗೆ ಎಷ್ಟು ಜನಗಳಿಗೆ ಕಾರನ್ನು ಕೊಟ್ಟಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಯಾರು ಯಾರಿಗೆ ಆದ್ಯತೆಯನ್ನು ಕೊಡಬೇಕೆಂಬುದು ಈ ಸಭೆಯ ಮೇಜಿನ ಮೇಲಿರತಕ್ಕ ಪಟ್ಟಿಯಲ್ಲಿದೆ, ಬೇಕಾದರೆ, ಮಾನ್ಯ ಸದಸ್ಯರು ಅದನ್ನು ನೋಡಬಹುದು. ಈ ಕಾರನ್ನು ಕೊಡುವ ವಿಷಯದಲ್ಲಿ ಎಲ್ಲರಿಗೂ ಅನ್ವಯವಾಗುವ ನಿಯಮಗಳು ವಿಧಾನ ಸಭೆಯ ಮಾನ್ಯ ಸದಸ್ಯರುಗಳಿಗೂ ಅನ್ವಯವಾಗುವುವು.

ಶ್ರೀ ಬಿ. ಚನ್ನಬ್ಯೆರೇಗೌಡ.—ಈಗ ತಾವು 161 ಜನಗಳಿಗೆ ಕಾರುಗಳನ್ನೇನು ಕೊಟ್ಟಿದ್ದೀರಿ. ಆ ಪೈಕಿ ಒಂದು ಕಾರು ಇರುವವರು ಎಷ್ಟು ಜನ ಇದ್ದಾರೆ, ಎರಡು ಕಾರುಗಳನ್ನು ಇಟ್ಟುಕೊಂಡಿರುವವರು ಎಷ್ಟು ಜನ ಇದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಅಂಥಾ ಕೇಸುಗಳು ಯಾವುದಾದರೂ ಇದ್ದರೆ ಅದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ನಾನು ಅದನ್ನು ನೋಡುತ್ತೇನೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ವಿಧಾನ ಸಭೆಯ ಸದಸ್ಯರು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹೋಗಬೇಕಾದರೆ ಅವರಿಗೆ ಕಾರಿನ ಅವಶ್ಯಕತೆ ಇಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ವಿಧಾನ ಸಭೆಯಲ್ಲಿರತಕ್ಕ ಹೆಣ್ಣು ಮಕ್ಕಳ ವಿಷಯವನ್ನು ತೆಗೆದು ಕೊಂಡರೆ ಅವರಲ್ಲ ಯಾರಿಗೆ ಕಾರಿನ ಅವಶ್ಯಕತೆ ಇದೆಯೆಂಬುದು ನನಗೆ ಗೊತ್ತಿಲ್ಲ. ಶ್ರೀಮತಿ ಸುಶೀಲಾಬಾಯಿ ಅವರ ವಿಷಯವನ್ನು ಹೇಳುವುದಾದರೆ ಈಗ ಅವರಿಗೆ ಒಂದು ಕಾರು ಇದೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಒಂದು ವೇಳೆ ನಮ್ಮಲ್ಲಿರತಕ್ಕ ಕಾರು ರಿಪೇರಿಗೆ ಹೋಗಿದ್ದರೆ, ಆಗ ನಾವು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹೋಗ ಬೇಕಾದರೆ ಸುಮಾರು 30-40 ಮೈಲಿ ಪ್ರಯಾಣ ಮಾಡಬೇಕಾಗುತ್ತದೆ, ಅಂಥಾ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಕಾರಿನ ಅವಶ್ಯಕತೆ ಇರುವುದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಬೇಕಾದರೆ ಅರ್ಜಿಯನ್ನು ಹಾಕಬಹುದು.

ಶ್ರೀ ಇ. ನಾರಾಯಣಗೌಡ.—ಈಗ ಯಾರಿಗಾದರೂ ಒಂದು ಕಾರನ್ನು ಅಲಾಟ್ ಮಾಡಿದರೆ ಅವರು ಅದನ್ನು ಎಷ್ಟು ದಿವಸ ಉಪಯೋಗಿಸಬೇಕೆಂದು ನಿರ್ಬಂಧ ಇದೆ. ಒಂದು ವೇಳೆ ಅವರು ಕಾರನ್ನು ತೆಗೆದುಕೊಂಡ ತಕ್ಷಣ ಅದನ್ನು ಅವರು ಕಾಳಸಂತೆಯಲ್ಲಿ ಬೇರೆ ಯಾರಿಗಾದರೂ ಮಾರಾಟ ಮಾಡಿದರೆ ಅಂಥವರ ಮೇಲೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಕಾರನ್ನು ತೆಗೆದುಕೊಂಡ ಮೇಲೆ ಎರಡು ವರ್ಷ ಮಾರಬಾರದು ಎಂದು ನಿಯಮ ಇದೆ. ಆದ್ದರಿಂದ ಅಷ್ಟರವರೆಗೂ ಅದನ್ನು ಮಾರುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈಗತಾನೆ ತಾವು ಹೇಳಿದಿರಿ, ಆದ್ಯತೆ ಮತ್ತು ಅರ್ಜೆನ್ಸಿಯನ್ನು ನೋಡಿಕೊಂಡು ಕಾರನ್ನು ಕೊಡುತ್ತೇವೆಂದು. ಈಗ ಯಾರಾದರೂ ಕಾರನ್ನು ತೆಗೆದುಕೊಳ್ಳುವವರು ನಮಗೆ ಕಾರಿನ, ಆದ್ಯತೆ ಮತ್ತು ಅವಶ್ಯಕತೆ ಹೆಚ್ಚಾಗಿದೆ ಎಂದು ಬರವಣಿಗೆಯಲ್ಲಿ ಬರೆದು ಅವರು ಅದನ್ನು ದುರುಪಯೋಗ ಮಾಡಿಕೊಂಡಿದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಕಂಡು ಹಿಡಿಯುವುದಕ್ಕೆ ಅಧಿಕಾರಿಗಳಿದ್ದಾರೆ, ಅವರು ಅದನ್ನು ಕಂಡುಹಿಡಿಯುತ್ತಾರೆ.

Multipurpose Co-operative Society at Shikaripur

*Q .—408. Smt. RATNAMMA MADHAVA RAO (Shimoga).—

Will the Government be pleased to state :—

(*a*) whether the Multipurpose Co-operative Society, Shikaripur, in its general body meeting held on 22 nd April 1958, had resolved to liquidate the Society ;

(*b*) if so, the reasons for not taking any action in this regard so far ?